

ಧಾಟಿಯಲ್ಲಿರುತ್ತವೆ. ಹಾಗಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತೀಯ ಚಲನಚಿತ್ರಗಳು ಹೆಚ್ಚು ಸುದ್ದಿ ಮಾಡುವುದಿಲ್ಲ ಎಂಬ ಒಂದು ಆಪಾದನೆ ನಮ್ಮ ಸಿನಿಮಾಗಳ ಮೇಲಿದೆ. ಅದು ಸ್ವಲ್ಪಮಟ್ಟಿಗೆ ನಿಜ ಕೂಡ. ಹಾಗಾಗಿ ನನಗೂ ನನ್ನ ಸಿನಿಮಾದ ಚಿತ್ರಕಥೆಗೆ ಒಬ್ಬ ವಿದೇಶೀ ಸ್ಕ್ರಿಪ್ಟ್ ಎಡಿಟರ್‌ನ ಅವಶ್ಯಕತೆಯಿತ್ತು. ಅದು ಕ್ಲೇರ್ ಡಾಬಿನ್ ಮೂಲಕ ನೆರವೇರುತ್ತದೆ ಎನ್ನುವ ಸಮಾಧಾನ ನನಗೆ ಉಂಟಾಯಿತು.

## ಚಿತ್ರದ ಯೋಚನೆ ಹುಟ್ಟಿದ್ದು ಹೀಗೆ.

'ಮೋಹನದಾಸ' ನನ್ನ ಹನ್ನೆರಡನೆಯ ಸಿನಿಮಾ. 'ಮುನ್ನುಡಿ'ಯಿಂದ ಮೊದಲುಗೊಂಡ ನನ್ನ ಎರಡು ದಶಕಗಳ ಸಿನಿಮಾ ಜರ್ನಿಯಲ್ಲಿ ಇದು ನಾನು ಮಾಡುತ್ತಿರುವ ಮೊದಲ ಬಯೋಪಿಕ್! ಎಂಟು ವರ್ಷಗಳ ಹಿಂದೆ ಈ ಸಿನಿಮಾದ ಮೊದಲ ಡ್ರಾಫ್ಟ್ ಬರೆದಾಗ ಅದಕ್ಕೆ 'ಪಾಪುಗಾಂಧಿ' ಎಂದು ಹೆಸರಿಡಲಾಗಿತ್ತು. ಬೊಳುವಾರು ಬರೆದ 'ಪಾಪುಗಾಂಧಿ ಗಾಂಧಿಬಾಪು ಆದ ಕತೆ' ಪುಸ್ತಕವೇ ಇದಕ್ಕೆ ಆಧಾರ. ಬೊಳುವಾರರ ಈ ಪುಸ್ತಕ ಓದುವವರೆಗೂ ನನಗೂ ಗಾಂಧಿಯ ಬದುಕಿನ ಬಗ್ಗೆ ಚಿತ್ರ ಮಾಡಬೇಕೆಂಬ ಆಲೋಚನೆಯೇನೂ ಇರಲಿಲ್ಲ.



ಏಳನೇ ವಯಸ್ಸಿನಲ್ಲಿ ಗಾಂಧಿ



ಹದಿಮೂರರ ವಯಸ್ಸಿನಲ್ಲಿ ಗಾಂಧಿ

'ಪಾಪುಗಾಂಧಿ' ಓದಿದ ಮೇಲೆ ಗಾಂಧಿಯ ಬಾಲ್ಯದ ಎಷ್ಟೋ ಘಟನೆಗಳು ನನಗೆ ಗೊತ್ತೇ ಇರಲಿಲ್ಲವಲ್ಲ ಅನ್ನಿಸಿತು. ನನ್ನ ಶಾಲಾ ದಿನಗಳಲ್ಲಿ ಅವರ ಬಾಲ್ಯದ ಒಂದೋ ಎರಡೊ ಘಟನೆಗಳ ಕುರಿತು ಪಾಠ ಓದಿದ ನೆನಪಷ್ಟೇ ಇದ್ದದ್ದು. ಆನಂತರ ನಾನು ಮಹಾತ್ಮ ಗಾಂಧಿಯವರೇ ಬರೆದ ಆತ್ಮಚರಿತ್ರೆಯನ್ನು ಮತ್ತೆ ಓದಿದೆ. ನನ್ನ ಹಿಂದಿನ